# ತೃತೀಯ ಬಿ.ಎ. ಪದವಿ ಪರೀಕ್ಷೆ

## ಡಿಸೆಂಬರ್ 2017

## ಅಂಚೆ ಮತ್ತು ತೆರಪಿನ ಶಿಕ್ಷಣ

(ಹೊಸಬರಿಗೆ / ಹಳಬರಿಗೆ)

**ಬಸವತತ್ವ**

**ಪತ್ರಿಕೆ–೪ ಬಸವ ತತ್ವ ಮತ್ತು ಶಿವಶರಣೆಯರು**

*ಘಂಟೆ: 3 hrs]* *ಅಂಕಗಳು: 70*

***ಸೂಚನೆಗಳು: ೩೦ ಅಂಕಗಳ ಆಂತರಿಕ ಪದ್ಧತಿಯಲ್ಲಿ ಬರೆದ ವಿದ್ಯಾರ್ಥಿಗಳು ೭೦ ಅಂಕಗಳ ಪ್ರಶ್ನೆಗಳಿಗೆ ಉತ್ತರಿಸುವುದು***
***೨೦ ಅಂಕಗಳ ಆಂತರಿಕ ಪದ್ಧತಿಯಲ್ಲಿ ಬರೆದ ವಿದ್ಯಾರ್ಥಿಗಳು ೮೦ ಅಂಕಗಳ ಪ್ರಶ್ನೆಗಳಿಗೆ ಉತ್ತರಿಸುವುದು***
***ವಿಶೇಷ ಸೂಚನೆ: ಹೊಸಬರು ''ಡಿ' ವಿಭಾಗದ ಪ್ರಶ್ನೆಯನ್ನು ಕಡ್ಡಾಯವಾಗಿ ಬರೆಯಬೇಕು.***

### ***ವಿಭಾಗ – ಎ***

**I.** **ಯಾವುದಾದರೂ ಎರಡು ವಚನಗಳನ್ನು ವಿಶ್ಲೇಷಿಸಿ.** 2 X 5 = 10 Marks

ಅ) ವಚನದಲ್ಲಿ ನಾಮಾಮೃತ ತುಂಬಿ
ನಯನದಲ್ಲಿ ಮೂರುತಿ ತುಂಬಿ
ಮನದಲ್ಲಿ ನಿಮ್ಮ ನೆನಪು ತುಂಬಿ
ಕಿವಿಯಲ್ಲಿ ಕೀರುತಿ ತುಂಬಿ
ಕೂಡಲಸಂಗಮ ದೇವ
ನಿಮ್ಮ ಚರಣ ಕಮಲದಲಾನು ತುಂಬಿ

ಆ) ನೀನೊಲಿದರೆ ಕೊರಡು ಕೊನರುವುದಯ್ಯ
ನೀನೊಲಿದರೆ ಬರಡು ಹಯನುವುದಯ್ಯ
ನೀನೊಲಿದರೆ ವಿಷವಮೃತವಹುದಯ್ಯ
ನೀನೊಲಿದರೆ ಸಕಲ ಪಡಿಪದಾರ್ಥ ಇದರಲಿಷ್ಟವು
ಕೂಡಲ ಸಂಗಮದೇವ

ಇ) ಅಂಗಸಂಗದಲ್ಲಿ ಲಿಂಗಸಂಗಿಯಾದೆನು
ಲಿಂಗ ಸಂಗದಲ್ಲಿ ಅಂಗಸಂಗಿಯಾದೆನು
ಉಭಯ ಸಂಘವನೂ ಅರಿಯದೆ ಪರಿಣಾಮಿಯಾದೆನು
ನುಡಿಯ ಗಡಣವ ಮರೆದು ತೆರಹಿಲ್ಲದಿದ್ದೆನು
ಎನ್ನ ದೇವ ಚೆನ್ನ ಮಲ್ಲಿಕಾರ್ಜುನನ ಬೆರಸಿದ ಬಳಿಕ
ಎನ್ನ ನಾನು ಏನೆಂದು ಅರಿಯನೆಯ್ಯಾ

### ವಿಭಾಗ – ಬಿ

**II.** ***ಯಾವುದಾದರೂ ನಾಲ್ಕಕ್ಕೆ ಉತ್ತರಿಸಿ*** 4X 10 = 40 Marks

ಅ) ಶರಣರು ಕಟ್ಟಬಯಸಿದ ಸ್ತ್ರೀ ಸಮಾಜದ ಲಕ್ಷಣಗಳನ್ನು ವಿವರಿಸಿ.

*Contd... 2*

ಆ) 'ಗಂಗಾಬಿಕೆಯು ಪತಿಭಕ್ತೆ ಸಂಪನ್ನೆ' ಎಂಬುದನ್ನು ವಿವರಿಸಿ.

ಇ) ಅಕ್ಕಮಹಾದೇವಿಯವರ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.

ಈ) ಬಸವಣ್ಣನ ದೇವರ ಪರಿಕಲ್ಪನೆಯನ್ನು ವಿವರಿಸಿ.

ಉ) ತ್ರಿವಿಧ ದಾಸೋಹ ಎಂದರೇನು? ವಿವರಿಸಿ.

## ವಿಭಾಗ – ಸಿ

**III. ಯಾವುದಾದರೂ ನಾಲ್ಕಕ್ಕೆ ಉತ್ತರಿಸಿ** 4 X 5 = 20 Marks

ಅ) "ಲಕ್ಷವಿಲ್ಲದ ವ್ರತ ಕಟ್ಟಳೆಯಿಲ್ಲದ ನೇಮ" ಎಂಬ ಅಕ್ಕಮಹಾದೇವಿಯ ಈ ಸಂದೇಶವನ್ನು ವಿವರಿಸಿ.

ಆ) "ನಿನ್ನ ಭಕ್ತಿಯ ಬೆಳೆಯೇ ಎನಗೆ ಸತ್ಯದ ಹಾದಿ" ಎಂಬ ಮೋಳಿಗೆ ಮಾರಯ್ಯನ ಈ ವಚನವನ್ನು ವಿವರಿಸಿ.

ಇ) "ಶರಣರು ಮೆಟ್ಟಿದ ಧರೆ ಪಾವನವಯ್ಯ" ಎಂದು ಅಕ್ಕಮಹಾದೇವಿಯು ಹೀಗೆ ಭಾವಿಸಿದ್ದು ಏಕೆ?

ಈ) ಎನ್ನ ಕುಲಸೂತಕವ ಕಳೆದಾತ ಬಸವಣ್ಣ" ಎಂಬ ನಾಗಲಾಂಬಿಕೆಯ ಈ ತಾತ್ವಿಕ ನಿಲುವನ್ನು ವಿವರಿಸಿ.

ಉ) ಅಕ್ಕಮಹಾದೇವಿಯು ಕಂಡ ಚನ್ನಮಲ್ಲಿಕಾರ್ಜುನನ್ನು ಕುರಿತು ಬರೆಯಿರಿ.

## ವಿಭಾಗ – ಡಿ

**V. ವಿ.ಸೂ.: ಹೊಸಬರು ಈ ಪ್ರಶ್ನೆಯನ್ನು ಕಡ್ಡಾಯವಾಗಿ ಬರೆಯಬೇಕು.** 1 X 10 = 10 Marks

ಅ) ಬಸವಣ್ಣನವರ ವಚನಗಳಲ್ಲಿ 'ಅನುಭಾವ"ವನ್ನು ವಿವರಿಸಿ.

** * * * **